ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ
ದಿನಾಂಕ : DATE : 19/2/2021


# ಮಾ.4ರಿಂದ ಕಲಾಪ, ಮಾ.8ಕ್ಕೆ ರಾಜ್ಯ ಬಜೆಟ್

## ಇದು ಮುಖ್ಯಮಂತ್ರಿ ಯಡಿಯೂರಪ್ಪ ಅವರ 8ನೇ ಬಜೆಟ್ | ಹಣಕಾಸು ನಿರ್ವಹಣೆ ಬಗ್ಗೆ ತೀವ್ರ ಕುತೂಹಲ

• ಕನ್ನಡಪ್ರಭ ವಾರ್ತೆ ಬೆಂಗಳೂರು 19/2/21

ಬಹುನಿರೀಕ್ಷಿತ 2021-22ನೇ ಸಾಲಿನ ರಾಜ್ಯ ಬಜೆಟ್ ಮಂಡನೆಗೆ ಮುಹೂರ್ತ ನಿಗದಿಯಾಗಿದ್ದು, ಬರುವ ಮಾರ್ಚ್ 8ರಂದು ಬಜೆಟ್ ಮಂಡನೆಯಾಗಲಿದೆ. ಮಾ.4ರಿಂದಲೇ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಮಾಸಾಂತ್ಯದವರೆಗೂ ಕಲಾಪ ನಡೆಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ನಿರ್ಣಯ ಕೈಗೊಂಡಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ, ಅಧಿವೇಶನದ ಮೊದಲ ಎರಡು ದಿನ ಮಾ.4 ಮತ್ತು 5ರಂದು ಸ್ಪೀಕರ್ ಅವರು ಈಗಾಗಲೇ ಘೋಷಿಸಿರುವಂತೆ 'ಒಂದು ದೇಶ ಒಂದು ಚುನಾವಣೆ' ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಯಲಿದೆ. ನಂತರ ಮಾ.8ರ ಸೋಮವಾರ ಬಜೆಟ್ ಮಂಡನೆಗೆ ಇಂದಿನ ಸಂಪುಟ ಸಭೆಯಲ್ಲಿ ನಿರ್ಧರಿಸಲಾಯಿತು ಎಂದರು.



ಈ ಬಾರಿಯದ್ದು ಮುಖ್ಯಮಂತ್ರಿ ಯಡಿಯೂರಪ್ಪ ಅವರ 8ನೇ ಬಜೆಟ್ ಆಗಲಿದ್ದು, ಕೋವಿಡ್ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಹಣಕಾಸಿನ ಇತಿಮಿತಿಯಲ್ಲಿ ಬಜೆಟ್ ಮಂಡನೆಗೆ ಈಗಾಗಲೇ ಮುಖ್ಯಮಂತ್ರಿ ಇಲಾಖೆಗಳೊಂದಿಗೆ ಬಜೆಟ್ ಪೂರ್ವಭಾವಿ ಸಭೆ ಮೂಲಕ ಸಿದ್ಧತೆ ನಡೆಸಿದ್ದಾರೆ.

ಕಳೆದ ವರ್ಷ ಉತ್ತರ ಕರ್ನಾಟಕ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಸಂಭವಿಸಿದ ಅತಿವೃಷ್ಟಿ, ಪ್ರವಾಹ, ದಕ್ಷಿಣದ ಕೆಲ ಜಿಲ್ಲೆಗಳಲ್ಲಿ ಬರ, ನಂತರ ಇಡೀ ವರ್ಷ ಕಾಡಿದ ಕೋವಿಡ್, ಲಾಕ್‌ಡೌನ್‌ನಿಂದ ರಾಜ್ಯ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಹಂತ ಹಂತವಾಗಿ ಲಾಕ್‌ಡೌನ್ ತೆರವು ಬಳಿಕ ಆರ್ಥಿಕತೆ ಪುನಶ್ಚೇತನಗೊಳ್ಳುತ್ತಿದ್ದರೂ ಇನ್ನೂ ಪೂರ್ಣ ಪ್ರಮಾಣದಲ್ಲಿ ಚೇತರಿಕೆ ಕಂಡಿಲ್ಲ. ಇದರ ನಡುವೆಯೇ ಯಡಿಯೂರಪ್ಪ ಮಂಡಿಸಲಿರುವ ಬಜೆಟ್ ಸಾರ್ವಜನಿಕ ವಲಯದಲ್ಲಿ ತೀವ್ರ ಕುತೂಹಲ ಸೃಷ್ಟಿಸಿದೆ.

# ಹಳ್ಳಿ ರಸ್ತೆಗಳ ನಿರ್ಮಾಣಕ್ಕೆ ₹1849 ಕೋಟಿ ಪ್ರಕಟ

## ಸಚಿವ ಸಂಪುಟ ಸಭೆಯಲ್ಲಿ ಹಲವು ಮಹತ್ವದ ನಿರ್ಧಾರ | ವಸತಿ ಇಲಾಖೆ 8 ಯೋಜನೆಗಳ ವೆಚ್ಚ ಪರಿಷ್ಕರಣೆ

**ಬೆಂಗಳೂರು:** ವಸತಿ ಇಲಾಖೆಯ ಎಂಟು ವಸತಿ ಯೋಜನೆಗಳ ಅಂದಾಜು ವೆಚ್ಚ ಪರಿಷ್ಕರಣೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 1848.95 ಕೋಟಿ ರು. ವೆಚ್ಚದಲ್ಲಿ ವಿವಿಧ ರಸ್ತೆ ಹಾಗೂ ಕಿರು ಸೇತುವೆ ನಿರ್ಮಾಣ ಯೋಜನೆಗಳಿಗೆ ಒಪ್ಪಿಗೆ ಸೇರಿದಂತೆ ಒಟ್ಟು 15ಕ್ಕೂ ಹೆಚ್ಚು ವಿಷಯಗಳಿಗೆ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಅವರು ಸಭೆಯಲ್ಲಿ ಅನುಮೋದನೆಯಾದ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ಕರ್ನಾಟಕ ಗೃಹ ಮಂಡಳಿಯ 2010-11 ಮತ್ತು 2011-12ನೇ ಸಾಲಿನ ಒಟ್ಟು ಎಂಟು ವಸತಿ ಯೋಜನೆಗಳ ಅಂದಾಜು ವೆಚ್ಚವನ್ನು ಶೇ.30.6ರಷ್ಟು ಹೆಚ್ಚಳದೊಂದಿಗೆ ಪರಿಷ್ಕರಿಸಲು ಸಭೆ ಒಪ್ಪಿಗೆ ನೀಡಿದೆ. ಇವು 227 ಬಡಾವಣೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಯೋಜನೆಗಳಾಗಿದೆ. ಇದರಿಂದ ಮೊದಲ ನಾಲ್ಕು ಯೋಜನೆಗಳ ಅಂದಾಜು ಮೊತ್ತ 561 ಕೋಟಿ ರು.ಗಳಿಗೆ, ಉಳಿದ ನಾಲ್ಕು ಯೋಜನೆಗಳ ಅಂದಾಜು ಮೊತ್ತ 791 ಕೋಟಿ ರು.ಗಳಿಗೆ ಪರಿಷ್ಕರಣೆಯಾಗಲಿದೆ ಎಂದು ವಿವರಿಸಿದರು.

ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆ-3ರ ಅಡಿಯಲ್ಲಿ 2204ಕಿ.ಮೀ ಉದ್ದದ ರಸ್ತೆ, 649 ಮೀಟರ್ ಉದ್ದದ 75 ಕಿರು ಸೇತುವೆ ನಿರ್ಮಾಣಕ್ಕೆ 1848 ಕೋಟಿ ಮೊತ್ತದ ಯೋಜನೆಗೆ ಒಪ್ಪಿಗೆ ದೊರೆತಿದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಕೈಗಾರಿಕೆ ಸ್ಥಾಪನೆಗಾಗಿ ಸ್ವಾಧೀನಪಡಿಸಿ ಕೊಂಡು ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಇದುವರೆಗೆ ಶೇ.40ರಷ್ಟು ಭೂಮಿಯನ್ನು ಆಯಾ ಭೂ ಮಾಲೀಕರಿಗೆ ಅಥವಾ ರೈತರಿಗೆ ನೀಡಲಾಗುತ್ತಿತ್ತು. ಇದನ್ನು ಶೇ.45ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಯಿತು. ಇದು ಸ್ವಾಧೀನವಾದ ಭೂಮಿಗೆ ಆರ್ಥಿಕ ಪರಿಹಾರ ಪಡೆಯದವರಿಗೆ ಮಾತ್ರ ಅನ್ವಯಿಸುತ್ತದೆ.

### ಸಂಪುಟ ಒಪ್ಪಿಗೆ ನೀಡಿದ ಇತರೆ ನಿರ್ಣಯಗಳು

- ಚಾಮರಾಜನಗರದಲ್ಲಿ ಕೃಷಿ ವಿಜ್ಞಾನ ಕಾಲೇಜು ಸ್ಥಾಪನೆಗೆ ಈ ವರ್ಷ 35.92 ಕೋಟಿ ರು. ಬಿಡುಗಡೆ.
- 8 ಮಕ್ಕಳ ಆಸ್ಪತ್ರೆ, 2 ಸಾಮಾನ್ಯ ಆಸ್ಪತ್ರೆಗಳು, ವಿಜಯಪುರ ಜಿಲ್ಲಾಸ್ಪತ್ರೆ ಮೇಲ್ದರ್ಜೆಗೇರಿಸಲು 199 ಕೋಟಿ ರು.
- ರಾಷ್ಟ್ರೀಯ ಹೆಲ್ತ್ ಮಿಷನ್ ಯೋಜನೆಯಡಿ 22 ತಾಯಿ ಮಕ್ಕಳ ಆಸ್ಪತ್ರೆಗೆ ಉಪಕರಣ ಖರೀದಿಗೆ 14.64 ಕೋಟಿ ರು.
- ಮಂಡ್ಯ ಜಿಲ್ಲೆ ಅಯ್ಯನ ಕೆರೆ ನಿರ್ಮಾಣಕ್ಕೆ 19.03 ಕೋಟಿ ರು. ನೀಡಲು ಸಮ್ಮತಿ.
- ನಾಗಮಂಗಲ ತಾಲೂಕು ಸಣ್ಣ ನೀರಾವರಿ ಯೋಜನೆಯ ವೆಚ್ಚ ಪುನರ್ ಪರಿಷ್ಕರಣೆ.
- ಸಹಕಾರ ಇಲಾಖೆಯ ಕರ್ನಾಟಕ ಠೇವಣಿ ಮತ್ತು ಹೂಡಿಕೆ (ತಿದ್ದುಪಡಿ) ವಿಧೇಯಕ 2020ಕ್ಕೆ ಸಮ್ಮತಿ.
- ಬೆಂಗಳೂರಿನ ವಸಂತ ನಗರದಲ್ಲಿ ಬಹುಮಹಡಿ ವಸತಿ ಕಟ್ಟಡ ನಿರ್ಮಾಣಕ್ಕೆ 117 ಕೋಟಿ ರು.
- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ 350 ಕೋಟಿ ರು. ನಿಧಿ ಸಂಗ್ರಹಕ್ಕೆ ರಾಜ್ಯ ಸರ್ಕಾರದ ಭದ್ರತೆ.
- ಶಿವಮೊಗ್ಗ ಜಿಲ್ಲೆಯ ಮಾಚೇನಹಳ್ಳಿ ಗ್ರಾಮದ ಬಸವನೆಲೆ ಟ್ರಸ್ಟ್‌ಗೆ 3.04 ಎಕರೆ ಜಮೀನು ಮಂಜೂರು.